ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೪ನೇ ವರ್ಷ ೨ನೇ ಸಂಚಿಕೆ ಕೊಪ್ಪ ೨-೯-೧೯೮೪ ಭಾನುವಾರ ಬೆಲೆ ೪೦ ಪೈಸೆ

ತೀವ್ರ ಪ್ರಚಾರ ಆಂದೋಲನ: ಸಭೆ ಕರೆದು

ಗೈರು ಹಾಜರಾದ ಅಧಿಕಾರಿಗಳು

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಕೊಪ್ಪ, ಶೃಂಗೇರಿ ತಾ|| ಗಳ ಆಯ್ದ ೩೬ ಗ್ರಾಮಗಳಲ್ಲಿ ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ ಇತರ ಇಲಾಖೆಗಳ ಸಹಯೋಗದೊಂದಿಗೆ ೮. ೨೩ ರಿಂದ ೨೬ರವರೆಗೆ 'ತೀವ್ರ ಪ್ರಚಾರ ಆಂದೋಲನ' ಏರ್ಪಡಿಸಿತ್ತು. ಬೆಳೆ ವಿಮೆ, ಉಚಿತ ಕಾನೂನು ನೆರವು, ವಿಧವಾ ವೇತನ, ಜಾನುವಾರುಗಳಿಗೆ ಚುಚ್ಚು ಮದ್ದು, ವಿವಿಧ ಯೋಜನೆಗಳಡಿ ದೊರಕುವ ಸೌಲಭ್ಯಗಳು—ಇವುಗಳ ಬಗ್ಗೆ ಮಾಹಿತಿ ನೀಡುವುದು, ಸಸಿಗಳ ಹಂಚಿಕೆ, ಕುಟುಂಬ ಕಲ್ಯಾಣ ಶಿಬಿರಗಳ ವ್ಯವಸ್ಥೆ, ಅಭಿವೃದ್ಧಿ ಕಾರ್ಯಕ್ರಮಗಳ ಪರಿಚಯ ಹಾಗೂ ಕ್ಷಯ ರೋಗ ನಿವಾರಣೆ ಮತ್ತು ರಕ್ಷಣಾ ಚಿಕಿತ್ಸೆ ಬಗ್ಗೆ ಸೇವಾ ಶಿಬಿರ ಮತ್ತು ವಿಚಾರ ಸಂಕಿರಣ–ಇವು ಆಂದೋಲನದ ಉದ್ದೇಶಗಳಾಗಿದ್ದವು.

ಸಭೆ ಕರೆದವರೇ ಗೈರುಹಾಜರಿ

ಈ ಅಂಗವಾಗಿ ನೆಮ್ಮಾರಿನಲ್ಲಿ ನಡೆದ ಸಭೆಯಲ್ಲಿ ಪ್ರಚಾರ ಇಲಾಖೆ, ರೇಷ್ಮೆ ಇಲಾಖೆ ಮತ್ತು ಪಶುಸಂಗೋಪನಾ ಇಲಾಖೆಗಳ ಅಧಿಕಾರಿಗಳ ಗೈರು ಹಾಜರಿಯಲ್ಲಿ ಶೃಂಗೇರಿಯ ವೈದ್ಯಾಧಿಕಾರಿ ಡಾ|| ಸತೀಶ್ ವಸ್ತು ಪ್ರದರ್ಶನ ವ್ಯವಸ್ಥೆಗೊಳಿಸಿದ್ದಲ್ಲದೆ, ಕುಟುಂಬ ಯೋಜನೆ ಹಾಗೂ ಕ್ಷಯರೋಗದ ಬಗ್ಗೆ ವಿವರವಾಗಿ ಮಾಹಿತಿ ಕೊಟ್ಟರು. ಅಧಿಕಾರಿಗಳ ಗೈರು ಹಾಜರಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತ ಪಡಿಸಿರುವ ಗ್ರಾಮಸ್ಥರು, ಇನ್ನು ಮುಂದೆಯೂ ಹೀಗೆ ಸಭೆ ಕರೆದು ಚಕ್ಕರ್ ಕೊಡುವುದಾದರೆ ಅವರ ಸಭೆಗಳಿಗೇ ಹೋಗುವುದಿಲ್ಲವೆಂದು ತಿಳಿಸಿದ್ದಾರೆ.

ಕೊಪ್ಪ ತಾ.ವ್ಯ.ಮಾ.ಸ.ಸಂಘಾ ನೂತನ ನಿರ್ದೇಶಕರು

ಕೊಪ್ಪ: ೮. ೨೩ರಂದು ನಡೆದ ಇಲ್ಲಿನ ತಾ.ವ್ಯ.ಮಾ.ಸ.ನಿ. ಚುನಾವಣೆಯಲ್ಲಿ ಈ ಕೆಳಕಂಡವರು ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ— 'ಎ' ತರಗತಿ: ಟಿ. ಆರ್. ಶಂಕರ ಹೆಗ್ಡೆ, ಕಾಡಪ್ಪ ಗೌಡ, ನರಸಿಂಹ ಶಾಸ್ತ್ರಿ, ಕೆ.ಎಸ್.ವೆಂಕಟೇಶ್, ಶ್ರೀನಿವಾಸ ಗೌಡ, ಹೆಚ್.ಎಸ್. ವಾಸುದೇವ.
'ಬಿ' ತರಗತಿ: ಜೆ.ಆರ್.ಕೋದಂಡರಾಮ ಭಟ್ಟ, ಎ. ಬಿ. ವಾಸಪ್ಪ, ರಾಘವೇಂದ್ರ ರಾವ್, ವಿಜಯ ರಾಘವ, ಜೆಚ್.ಟಿ.ಕೃಷ್ಣ ಮೂರ್ತಿ.

ಮತದಾರರು ಬಹಳ ಬುದ್ಧಿವಂತಿಕೆಯಿಂದ ಮತ ಚಲಾಯಿಸಿದ್ದು, ಜಾತೀಯತೆ, ಗುಂಪುಗಾರಿಕೆಗಳನ್ನು ಕೊನೆಯ ಪಾಕಿಸ್ತಾರಿನ್ನಲಾಗಿದೆ. ಅಲ್ಲದೆ, ಹಳಬರು ಮತ್ತು ಹೊಸಬರ ಒಂದು ಸಮತೋಲನ ತಂಡವನ್ನು ಆಯ್ಕೆ ಮಾಡಿರುವುದೂ ಒಂದು ವಿಶೇಷ.

ಎಸ್ಟೇಟ್‌ಗಳಲ್ಲಿ ಮಕ್ಕಳ 'ಕುರುಡುತನ' ನಿವಾರಣೆಗೆ ಲಯನ್ಸ್ ಕ್ಲಬ್ ಯೋಜನೆ

ಕೊಪ್ಪ: ಕಾಫಿ ತೋಟಗಳಲ್ಲಿ ಸಾಮಾನ್ಯವಾಗಿ ಮಕ್ಕಳನ್ನು ಕಾಡುವ 'ಕುರುಡುತನ' ರೋಗವನ್ನು ತಡೆಗಟ್ಟುವ ಬಗ್ಗೆ ಇಲ್ಲಿನ ಲಯನ್ಸ್ ಕ್ಲಬ್ ತನ್ನ ಸದಸ್ಯರು ಮಾತ್ರವಲ್ಲದೆ ಸುತ್ತಮುತ್ತಲ ಎಲ್ಲಾ ಎಸ್ಟೇಟುಗಳಲ್ಲೂ ಸೂಕ್ತ ಚಿಕಿತ್ಸೆ ಮತ್ತು ಮುಂಜಾಗ್ರತೆ ಕ್ರಮಗಳನ್ನನುಸರಿಸುವಂತೆ ಅವರುಗಳನ್ನು ಪ್ರೇರೇಪಿಸಲು ಈ ಸಲದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ತೀರ್ಮಾನಿಸಿದೆ.

ನಿಯಮಿತವಾಗಿ ಮಕ್ಕಳ ವೈದ್ಯಕೀಯ ತಪಾಸಣೆ ಮಾಡಿಸುವುದು, ಜಂತು ಹುಳಕ್ಕೆ ಔಷಧಿ ಕೊಡಿಸುವುದು ಮತ್ತು ೨ ತಿಂಗಳಿಗೆ ಒಂದಾವರ್ತಿ ಎ ಅಂಡ್ ಪಿ ಕ್ಯಾಪ್ಸೂಲ್ ಕೊಡಿಸುವುದು—ಇವು ಈ ರೋಗ ನಿವಾರಣೆಯ ಮುಖ್ಯ ಕ್ರಮಗಳಾಗಿವೆ.

ಕೊಪ್ಪ ತಾ. ವ್ಯ. ಮಾ. ಸಹಕಾರ ಸಂಘ:

ಸಹಕಾರಿ ರಂಗದಲ್ಲಿ ಮೇಲ್ಪಂಕ್ತಿ

(ವಿಶೇಷ ಪ್ರತಿನಿಧಿಯಿಂದ)

ಕೊಪ್ಪ: ಇಲ್ಲಿನ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು ಉತ್ತಮ ಪ್ರಗತಿ ಸಾಧಿಸುತ್ತಿದ್ದು, ಇಂದು ತೀವ್ರ ರೋಗಗ್ರಸ್ತವಾಗಿರುವ ಸಹಕಾರಿ ರಂಗದಲ್ಲಿ ಉತ್ತಮ ವ್ಯವಹಾರಕ್ಕೆ ಒಂದು ಮೇಲ್ಪಂಕ್ತಿಯಾಗಿ ಬೆಳೆಯುತ್ತಿದೆ.

ಕಳೆದ ಹತ್ತು ವರ್ಷಗಳಿಂದಲೂ ಸತತ ಲಾಭ ಗಳಿಸುತ್ತ ಕಳೆದ ವರ್ಷ ಒಂದೂವರೆ ಲಕ್ಷ ರೂ.ಗಳಷ್ಟು ಲಾಭ ಗಳಿಸಿರುವ ಸಂಘ ಸರ್ಕಾರವನ್ನು ಹೆಚ್ಚಾಗಿ ಅವಲಂಬಿಸದೆ ತನ್ನ ಕಾಲ ಮೇಲೆ ತಾನು ನಿಂತಿದೆ.

ಹಲವು ವಿಶಿಷ್ಟ ಯೋಜನೆಗಳು

ಸಂಘದ ಚಟುವಟಿಕೆ ಹಲವು ಕ್ಷೇತ್ರಗಳಿಗೆ ಹಬ್ಬುತ್ತಿದ್ದು, ಈಚೆಗಷ್ಟೆ ಕಮ್ಮರಡಿಯಲ್ಲೊಂದು ಶಾಖೆಯನ್ನು ತೆರೆಯಲಾಗಿದೆ. ಕೊಪ್ಪ, ಶೃಂಗೇರಿ, ನ.ರಾ.ಪುರ ತಾ||ಗಳಿಗಾಗಿ ಅಡಿಗೆ ಗ್ಯಾಸ್ (ಸಿಲಿಂಡರ್) ಮತ್ತು ಸೀಮೆಯೆಣ್ಣೆ ವಿತರಣಾ ಏಜೆನ್ಸಿ ಕೇಳಿದ್ದು, ಸದ್ಯದಲ್ಲೇ ದೊರೆಯುವ ನಿರೀಕ್ಷೆಯಿದೆ.

ಸಂಘದ ಅಕ್ಕಿಗಿರಣಿಯಲ್ಲಿ 'ಪ್ರೀಕ್ಲೀನರ್' ಅಳವಡಿಸುವ ಸಿದ್ಧತೆ ನಡೆದಿದೆ. ಇದರಿಂದ ಅಕ್ಕಿ ಸಂಪೂರ್ಣ ಸ್ವಚ್ಛಗೊಳಿಸಲ್ಪಟ್ಟು, ಸೀದಾ ಅಡಿಗೆಗೆ ಬಳಸುವಂತಾಗುತ್ತದೆ.

ತೀರ್ಥಹಳ್ಳಿಯೂ ಸೇರಿದಂತೆ ೪ ತಾ||ಗಳಿಗೆ ಕೇಂದ್ರವಾಗಿ ಕೊಪ್ಪದಲ್ಲಿ ಕೋಕೋ ಸಂಸ್ಕರಣ ಕೇಂದ್ರ ಮತ್ತು ಸಂಗ್ರಹಣೆ ಡಿಪೋ ತೆರೆಯಲು ಕ್ಯಾಂಪ್ಕೋ ಉದ್ದೇಶಿಸಿದ್ದು, ಅದು ಈ ಸಂಘದ ಮೇಲ್ವಿಚಾರಣೆಗೆ ಒಳಪಡುವ ನಿರೀಕ್ಷೆಯಿದೆ.

ಸಂಘದ ಶೇರುದಾರರ ಮಕ್ಕಳು ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಆದರೆ ಅವರಿಗೆ ತಲಾ ೧೦೦ ರೂ. ಪ್ರೋತ್ಸಾಹ ಬಹುಮಾನ ಕೊಡುವ ಯೋಜನೆಯನ್ನು ಆರಂಭಿಸಿರುವ ಸಂಘ ತನ್ನ ನೌಕರರಿಗೂ ಉತ್ತಮ ಮಟ್ಟದಲ್ಲಿ ಸಂಬಳ ಭತ್ಯ, ಬೋನಸ್‌ಗಳನ್ನು ಕೊಡುತ್ತಿದೆ.

ಮೆಚ್ಚುಗೆ

ಇಂಥ ಹೆಮ್ಮೆಯ ಸಾಧನೆ-ಯೋಜನೆಗಳ ಹರಿಕಾರರಾಗಿರುವ ಅಧ್ಯಕ್ಷ ಎ.ಬಿ.ವಾಸಪ್ಪ ಮತ್ತು ಕಾರ್ಯದರ್ಶಿ ನರಸಿಂಹ ಮೂರ್ತಿ ಇವರುಗಳ ಬಗ್ಗೆ ಶೇರುದಾರರು ಅಪಾರ ಅಭಿಮಾನ, ಮೆಚ್ಚುಗೆ ಹೊಂದಿದ್ದಾರೆ. ಇದರಲ್ಲಿ ಹಿಂದಿನ ಅಧ್ಯಕ್ಷ ಯು. ಕೆ. ಶಾಮಣ್ಣನವರಿಗೂ ಪಾಲಿಲ್ಲದೆ ಇಲ್ಲ.

"ಮುರುಗನ ಹುಳಿ ಕಳ್ಳ ಸಾಗಣೆಗೆ ಅರಣ್ಯ ಇಲಾಖೆಯೇ ಹೊಣೆ" :

—ಗಿರಿಜನ ಸೊಸೈಟಿ ಪ್ರತಿಕ್ರಿಯೆ

ಕೊಪ್ಪ: ಕಾಡುಗಳಿಂದ ಮುರುಗನ ಹುಳಿಯ ಕಳ್ಳ ಸಾಗಾಣಿಕೆಗೆ ಅರಣ್ಯ ಇಲಾಖೆಯೇ ಹೊಣೆ ಎಂಬುದಾಗಿ ಇಲ್ಲಿ ಕೇಂದ್ರ ಕಛೇರಿ ಹೊಂದಿರುವ ಗಿರಿಜನ ವಿವಿಧೋದ್ದೇಶ ಸಹಕಾರ ಸಂಘ (ಲ್ಯಾಂಬ್ ಸೊಸೈಟಿ) ಪ್ರತಿಕ್ರಿಯೆ ವ್ಯಕ್ತಪಡಿಸಿದೆ.

"ನಮ್ಮ ಸಂಸ್ಥೆಗೆ ಕೊಡಲಾಗಿದ್ದ ೧೯೮೨-೮೪ರ ೨ ವರ್ಷದ ಗುತ್ತಿಗೆ ೩೦-೬-೮೪ಕ್ಕೆ ಮುಗಿದಿದ್ದು, ಅದನ್ನು ನವೀಕರಿಸುವಂತೆ ೧೯-೫-೮೪ರಂದೇ ಅರ್ಜಿ ಸಲ್ಲಿಸಿದ್ದರೂ ಇಲಾಖೆ ಪರವಾನಗಿ ಕೊಡಲಿಲ್ಲ. ಹೀಗಾಗಿ ಅದರ ಒಡೆತನದಲ್ಲೇ ಇದ್ದ ಈ ಉತ್ಪನ್ನದ ಕಳ್ಳ ಸಾಗಾಣಿಕೆಗೆ ಇಲಾಖೆಯೇ ಪೂರ್ತಿ ಹೊಣೆ" ಎಂದು ಲ್ಯಾಂಬ್ ಅಧ್ಯಕ್ಷರು ತಿಳಿಸಿದ್ದಾರೆ.

ಉತ್ತರವಿಲ್ಲ

ಈ ವಿಷಯದಲ್ಲಿ ಸಾರ್ವಜನಿಕರಿಗಾಗಿ ವಿವರಣೆ ಬಯಸಿ, ಆಗ ಕೊಪ್ಪ ವಿಭಾಗ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಕೆ.ಸುಂದರನಾಯ್ಕ್ ಅವರಿಗೂ ಈಗಿನ ಅಧಿಕಾರಿ ವಿನಯ್ ಲೂಥ್ರ ಅವರಿಗೂ 'ಮುಂಜಾವು' ಬರೆದ ಪತ್ರಕ್ಕೆ ಇಬ್ಬರೂ ಉತ್ತರಿಸಿಲ್ಲ.

'ಅರಣ್ಯ ಕಂಟ್ರಾಕ್ಟರ್ ಕರೀಮನನ್ನು ಸಿಬ್ಬಂದಿ ತಡೆದಾಗ ಸೊಸೈಟಿಯ ಪರ್ಮಿಟ್ ತೋರಿಸಿದ' ಎಂದು ಶೃಂಗೇರಿ ಅಧಿಕಾರಿಗಳು ಹೇಳಿರುವುದೆಲ್ಲ ಭ್ರಷ್ಟತೆಯ ನಾಟಕ. (ಗುತ್ತಿಗೆ ನವೀಕರಿಸಿಲ್ಲವೆಂದು ಅವರಿಗೆ ಚೆನ್ನಾಗಿ ಗೊತ್ತಿತ್ತು.) ಇಲಾಖೆಯ ಒಡೆತನದಲ್ಲಿದ್ದ ಈ ಉತ್ಪನ್ನವನ್ನು ಲಕ್ಷಾಂತರ ರೂ.ಗಳಷ್ಟು ಕಳ್ಳ ಸಾಗಣೆಗೆ ಬಿಟ್ಟದ್ದಕ್ಕೆ ಇಲಾಖೆಯ ಭ್ರಷ್ಟತೆಯೇ ಕಾರಣ; ಹಾಗೂ ಪರವಾನಗಿ ನವೀಕರಣ ಮಾಡದಿದ್ದುದೂ ಇದೇ ಕಾರಣಕ್ಕೆ—ಎಂಬ ಸಾರ್ವಜನಿಕ ಟೀಕೆಗಳಿಗೆ ಅವರದು ಮೌನ ಸಮ್ಮತಿ.

೧೯೮೨ರ ಕ್ರಮ ಏನಾಯಿತು?

೧೯೮೨ರಲ್ಲಿ ಇದೇ ಕರೀಂ ಗುಳಮಾವಿನ ತೊಪ್ಪೆ ಅಕ್ರಮ ಸಾಗಣೆಯಲ್ಲಿ ಸಿಕ್ಕಿಬಿದ್ದಾಗ ಆಗಿನ ಶೃಂಗೇರಿ ವಲಯಾಧಿಕಾರಿ ಸೂರ್ಯಾಚಾರ್, "ಆತನಿಗೆ ಗರಿಷ್ಠ ಪ್ರಮಾಣದ ದಂಡ ವಿಧಿಸಲು, ಆತನ ಕೇವಣೆ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಆತನಿಗೆ ಮುಂದೆ ಇಲಾಖೆಯಲ್ಲಿ ಯಾವುದೇ ಕಂಟ್ರಾಕ್ಟ್ ಸಿಗದಂತೆ ಕಪ್ಪು ಪಟ್ಟಿಯಲ್ಲಿ ಸೇರಿಸಲು (ಬ್ಲಾಕ್‌ಲಿಸ್ಟ್ ಮಾಡಲು) ಶಿಫಾರ್ಸು ಮಾಡುತ್ತೇನೆ" ಎಂದು ಪತ್ರಿಕೆಗೆ ಹೇಳಿಕೆ ಕೊಟ್ಟಿದ್ದರು. [ಶೃಂಗೇರಿಯ ಹಾಲಿ ಪುರಸಭಾಧ್ಯಕ್ಷ ಹಾಗೂ ಆಗಿನ ತಾ|| ಕಾಂಗ್ರೆಸ್ ಅಧ್ಯಕ್ಷ ಕೆ.ಆರ್.ಅಣ್ಣಯ್ಯ ಹೆಗ್ಡೆಯವರ ಎದುರೇ.] ಅವರು ಹಾಗೆ ಶಿಫಾರ್ಸು ಮಾಡಲಿಲ್ಲವೆ ಅಥವಾ ಮಾಡಿಯೂ ಮೇಲಧಿಕಾರಿಗಳು ಅಂಥ ಕ್ರಮ ತೆಗೆದುಕೊಳ್ಳಲಿಲ್ಲವೆ?—ಎಂಬ ಪ್ರಶ್ನೆಗಳಿಗೂ ಸಮಜಾಯಿಷಿಯಿಲ್ಲ.

ಕೊಪ್ಪದ ನಲ್ಲಿ ನೀರು ಶುದ್ಧೀಕರಿಸಿ ಸರಬರಾಜು ಮಾಡಲು ಸೂಚನೆ

ಕೊಪ್ಪ: ಮೇ ತಿಂಗಳಲ್ಲಿ ಕೊಪ್ಪದ ನಲ್ಲಿ ನೀರು ಕುಡಿಯಲು ಅಯೋಗ್ಯವಾಗಿದೆಯೆಂದು ಸಾರ್ವಜನಿಕರು ಮಾಡಿದ ದೂರನ್ನು ಆರೋಗ್ಯ ಇಲಾಖೆ ಎತ್ತಿ ಹಿಡಿದಿದೆ.

ನಲ್ಲಿಯ ನೀರಿನ ಸ್ಯಾಂಪಲ್ ಸಂಗ್ರಹಿಸಿ ಪ್ರಯೋಗ ಶಾಲೆಗೆ ಕಳಿಸಲಾಗಿ, ಅದು ಕಲುಷಿತ ಹಾಗೂ ಸಾರ್ವಜನಿಕ ಬಳಕೆಗೆ ಅಯೋಗ್ಯವೆಂದು ಸಾರ್ವಜನಿಕ ಆರೋಗ್ಯ ಸಂಸ್ಥೆಯ ಜಂಟಿ ನಿರ್ದೇಶಕರಿಂದ ದೃಢೀಕರಿಸಲ್ಪಟ್ಟು, ಇನ್ನು ಮುಂದೆ ಸಾರ್ವಜನಿಕರಿಗೆ ಸರಬರಾಜು ಮಾಡುವ ನೀರನ್ನು ಮೊದಲು ಸ್ಫಟಿಕ ಮತ್ತು ಬ್ಲೀಚಿಂಗ್ ಪುಡಿಯಿಂದ ಶುದ್ಧೀಕರಿಸಬೇಕು ಎಂಬುದಾಗಿ ಇಲಾಖೆ ಪುರಸಭೆಗೆ ನಿರ್ದೇಶಿಸಿದೆ.

ಈ ಬಗ್ಗೆ ನಮ್ಮ ೧೯-೫-೮೪ರ ಪತ್ರಕ್ಕೆ ಉತ್ತರವಾಗಿ ಜಿಲ್ಲಾ ಆರೋಗ್ಯಾಧಿಕಾರಿಗಳು ಈ ವಿಷಯ ತಿಳಿಸಿದ್ದಾರೆ. ಪುರಸಭೆ ಮೇಲ್ಕಂಡ ನಿರ್ದೇಶನವನ್ನು ಪಾಲಿಸುತ್ತಿರುವುದಾಗಿ ವರದಿಯಾಗಿದೆ.

ಚುನಾಯಿತ ಸರ್ಕಾರಗಳ ವಜಾ — ಒಂದು ವಿಶ್ಲೇಷಣೆ

ದೇಶದಲ್ಲೀಗ ಅಲ್ಲೋಲ ಕಲ್ಲೋಲವಾದ ರಾಜಕೀಯ ಸ್ಥಿತಿಯಿದೆ. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳ ಸರ್ಕಾರಗಳು ಈಚಿನ ವರ್ಷಗಳಲ್ಲಿ ಆರಿಸಿ ಬಂದಿದ್ದು, ಈ ಸಂಖ್ಯೆ ಒಂದು ಚುನಾವಣೆಯಿಂದ ಇನ್ನೊಂದಕ್ಕೆ ಹೆಚ್ಚುತ್ತಲೇ ಇತ್ತಷ್ಟೆ. ಇದನ್ನು ಸಹಿಸದ ಕೇಂದ್ರದ ಕಾಂಗ್ರೆ ಸರ್ಕಾರ ಅನೈತಿಕತೆಯ ಎಲ್ಲಾ ಮಿತಿಯನ್ನೂ ಮೀರಿ, ಇಂಥ ಸರ್ಕಾರಗಳನ್ನು ಕಿತ್ತು ಹಾಕಿ ತನ್ನ ಕೈಗೊಂಬೆ ಸರ್ಕಾರಗಳನ್ನು ಅಥವಾ ರಾಷ್ಟ್ರಪತಿ ಆಡಳಿತವನ್ನು ಜನರ ಮೇಲೆ ಹೇರುತ್ತಿದೆ.

ಇದಕ್ಕೂ ಮೊದಲು ಈ ಸರ್ಕಾರಗಳು ಅಧಿಕಾರಕ್ಕೆ ಬಂದಂದಿನಿಂದಲೂ ಅವಕ್ಕೆ ಸುಸೂತ್ರವಾಗಿ ಕೆಲಸ ಮಾಡಲು ಬಿಡದೆ ಇಲ್ಲದ ಗಲಭೆ ಎಬ್ಬಿಸಿ ಅವನ್ನು ಅಭದ್ರಗೊಳಿಸಲು ಮತ್ತು ಪಕ್ಷಾಂತರಗಳ ಮೂಲಕ ಅವನ್ನು ಉರುಳಿಸಲು ಈ ಕಾಂಗ್ರೆ ಯತ್ನಿಸುತ್ತಲೇ ಇದೆ. ಇಂಥ ಚಟುವಟಿಕೆಯನ್ನು ಕರ್ಣಾಟಕದಲ್ಲಿ ಒಂದೂವರೆ ವರ್ಷದಿಂದಲೂ ನೋಡಿ ನೋಡಿ ನಮಗೆ ಹೇಸಿರೋಸಿ ಹೋಗಿದೆ.

ಸರ್ವ ನಿಶ್ಚಯ

ಈ ಎಲ್ಲ ಹೆಣಗಾಟಗಳೂ ವಿಫಲವಾಗಿ ಈಗ ನಮ್ಮ ಕೇಂದ್ರ ಸರ್ಕಾರ ಸರ್ವ ನಿಶ್ಚಯದ ಕ್ರಮಕ್ಕಿಳಿದಿದೆ. ಮೊನ್ನೆ ಕಾಶ್ಮೀರದಲ್ಲಿ ಮತ್ತು ಈಗ ಆಂಧ್ರದಲ್ಲಿ—ಮುಖ್ಯಮಂತ್ರಿಗಳಿಗೆ ಸ್ಪಷ್ಟ ಬಹುಮತವಿರುವುದು ಗೊತ್ತಿದ್ದೂ ಅಲ್ಲಿನ ರಾಜ್ಯಪಾಲರೆಂಬ ಕೀಲು ಬೊಂಬೆಗಳು ಯಾವನೋ ಒಬ್ಬ 'ಬಂಡಾಯ' ಮಂತ್ರಿಯನ್ನು ಹುಡುಕಿ, ಅವನಿಗೆ ಮುಖ್ಯ ಮಂತ್ರಿಯಾಗಿ (ಸತ್ಯದ, ಸಂವಿಧಾನದ ಹೆಸರಲ್ಲಿ!) ಪ್ರಮಾಣ ವಚನ ಬೋಧಿಸಿ, ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಪಡಿಸಲು ಒಂದು ತಿಂಗಳ ಕಾಲಾವಕಾಶ ನೀಡಿವೆ. ಈ ಅವಧಿಯಲ್ಲಿ ಶಾಸಕರ ಒಣ ಮೀನು ಖರೀದಿ ಯಾವ ರೀತಿ ನಡೆಯುತ್ತೆಂಬುದು ಎಲ್ಲರಿಗೂ ಗೊತ್ತು. ಈಗ ಮುಂದಿನ ಸರದಿ ನಮ್ಮ ಕರ್ಣಾಟಕದ್ದಿರಬಹುದು.

ಆದರೆ, ಇಂಥ ಸಂವಿಧಾನ ವಿರೋಧಿ, ಪ್ರಜಾತಂತ್ರವಿರೋಧಿ ಕ್ರಮವನ್ನು ಇಂದು ದೇಶಾದ್ಯಂತ 'ಪ್ರಜ್ಞಾವಂತ'ರಿಂದ ಹಿಡಿದು 'ಸಾಮಾನ್ಯ ಜನತೆ'ಯವರೆಗೆ ಇಡೀ ಜನಸ್ತೋಮ ಪ್ರತಿಭಟಿಸುತ್ತಿದೆ. ಈ ನಿಟ್ಟಿನಲ್ಲಿ ಮೊನ್ನೆ ಆ. ೨೫ರಂದು ದೇಶಾದ್ಯಂತ ನಡೆದ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ದೇಶಾದ್ಯಂತ – ಹಳ್ಳಿಹಳ್ಳಿಗಳ ಮಟ್ಟದವರೆಗೆ ಹೀಗೊಂದು ಬಂದ್ ಇಷ್ಟು ಯಶಸ್ವಿಯಾಗಿ ನಡೆಯುತ್ತಿರುವುದು ಬಹುಶಃ ಈ ದೇಶದ ಮಟ್ಟಿಗೆ ಒಂದು ಅಭೂತಪೂರ್ವ ಎನ್ನಬಹುದಾದ ಸಂದರ್ಭವೇ ಸರಿ. ಭ್ರಷ್ಟ, ಕುಲಗೆಟ್ಟ, ನೀತಿಗೆಟ್ಟ, ಒಗ್ಗಟ್ಟಿಲ್ಲದ, ಅಸಂಖ್ಯವಾಗಿರುವ ನಮ್ಮ ವಿರೋಧ ಪಕ್ಷಗಳ ಕರೆಗೂ ಜನ ಓಗೊಟ್ಟಿದ್ದಾರೆಂದರೆ, ಅದು ಈ ದೇಶದ ಜನರಲ್ಲಿ ಪ್ರಜಾತಂತ್ರದ ಆಕಾಂಕ್ಷೆ ಎಷ್ಟು ಗಾಢವಾಗಿ ಬೆಳೆಯುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಈಗ, ಹೀಗೆ ಚುನಾಯಿತ ಸರ್ಕಾರಗಳನ್ನು ಕಿತ್ತು ಹಾಕುತ್ತಿರುವುದರ ಅರ್ಥವೇನೆಂದು ವಿವೇಚಿಸೋಣ.

ಆಳುವ ವರ್ಗದ ಕುತಂತ್ರ

ಇಡೀ ದೇಶದ ಆರ್ಥಿಕ ವ್ಯವಸ್ಥೆಯ ಗಂಟಲನ್ನು ತಮ್ಮ ಮುಷ್ಟಿಯಲ್ಲಿ ಬಿಗಿ ಹಿಡಿದುಕೊಂಡು, ಆ ಪಟ್ಟಿನ ಬಲದಿಂದ ದೇಶದ ಸಮಸ್ತ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಗುಹೋಗುಗಳನ್ನೆಲ್ಲ ತಮ್ಮ ಹಿತಾಸಕ್ತಿಗೆ ತಕ್ಕಂತೆ ನಿಯಂತ್ರಿಸುತ್ತಿರುವ, ಈ ದೇಶದ ಜನಸಂಖ್ಯೆಯ ಕೇವಲ ಶೇ. ೫ ರಷ್ಟಿರುವ ಅತಿ ಶ್ರೀಮಂತರ ವರ್ಗ—ಆಳುವ ವರ್ಗ—ಜನತೆಯಲ್ಲಿ ಪ್ರಜಾ ಪ್ರಭುತ್ವದ ಆಕಾಂಕ್ಷೆ, ಮನೋಭಾವ ಬೆಳೆಯುವುದನ್ನು ಮಟ್ಟ ಹಾಕಲು ಬಯಸುತ್ತದೆ. ಅದಕ್ಕಾಗಿ ಮಿತಿಯಿಲ್ಲದ, ಕೇಂದ್ರೀಕೃತವಾದ ಅಧಿಕಾರ ಬೇಕು. ಗಣರಾಜ್ಯದ ಕಲ್ಪನೆಗೆ ಗೋರಿ ತೋಡಿ, ಎಲ್ಲಾ ರಾಜ್ಯಗಳ ಜನತೆಯೂ ಈ ಕೇಂದ್ರೀಕೃತ ಅಧಿಕಾರಕ್ಕೆ ತಲೆಬಾಗುವಂತೆ ಮಾಡಲು ಅದು ಹೆಣಗುತ್ತಿದೆ. ಈ ಪ್ರಯತ್ನ ಕೈಗೂಡಬೇಕಾದರೆ ಕಾಂಗ್ರೆಸ್‌ನಂತಹ ಕೇಂದ್ರೀಕೃತ ಶಕ್ತಿಯ ಪಕ್ಷ ತನಗಾಗಿ ಇಡೀ ದೇಶವನ್ನು ಆಳಬೇಕೆಂದು ಅದರ ಲೆಕ್ಕಾಚಾರ. ಈ ಆಳುವ ವರ್ಗದ ಧನಬಲ ಮತ್ತು ಕುತಂತ್ರವೇ ಈಗ ದೇಶದಲ್ಲಿ ಒಂದರ ಹಿಂದೊಂದು ಅಕೃತ್ಯ ನಡೆಸುತ್ತಿರುವುದು.

ಚುನಾವಣೆಗೆ 'ಸಿದ್ಧತೆ'— ಅಕೃತ್ಯಗಳ ಸರಮಾಲೆ

ಸದ್ಯದಲ್ಲೇ ಲೋಕಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯಬೇಕಾಗಿದೆ. ಆದರೆ ಚುನಾವಣೆಗಳನ್ನು ಜನರ ಇಷ್ಟ ಪ್ರಕಾರ ನಡೆಯಲು ಬಿಟ್ಟರೆ ಆಳುವ ವರ್ಗದ ಈ ಯಶಸ್ವೀ ಪ್ರತಿನಿಧಿ ಪುನಃ ಇಂಥ ನಿರಂಕುಶ ಅಧಿಕಾರ ಗಳಿಸಲು ಸಾಧ್ಯವೇ ಇಲ್ಲವೆಂಬುದು ಶತಸ್ಸಿದ್ಧ. ಆದ್ದರಿಂದ ಎಲ್ಲಾ ಕಡೆ ಚುನಾವಣೆಗಳಲ್ಲಿ ಕಾಂಗ್ರೆಯೇ ಗೆಲ್ಲುವಂತೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಗೋಲ್‌ಮಾಲ್ ಮಾಡಬೇಕಾದರೆ ಹಣ, ಪೋಲೀಸು ಮತ್ತು ಅಧಿಕಾರ ವರ್ಗ ಅವರ ಅಡಿಯಾಳಾಗಿರಬೇಕು. ಅದಕ್ಕಾಗಿ ಎಲ್ಲಾ ಕಡೆ ಕಾಂಗ್ರೆನ ಸ್ವಂತ ಅಥವಾ ಅದರ ಕೈಗೊಂಬೆಯಾದ ಸರ್ಕಾರ ಇರಬೇಕು.

ಅದಕ್ಕೇ ಇಷ್ಟೆಲ್ಲ ಅಕೃತ್ಯಗಳು, ಸರ್ವಾಧಿಕಾರದ ಕ್ರಮಗಳು ಎಂದರೆ ತಪ್ಪೆಲ್ಲವಷ್ಟೆ?

೨೭.೮.೭೪ **ಸಿರಿಮನೆ ನಾಗರಾಜ್.**

ಬಂದ್ : ಕೆಲ ವೈಶಿಷ್ಟ್ಯಗಳು

§ ಆಂಧ್ರ ಸರ್ಕಾರದ ವಜಾಕ್ಕೆ ಒಬ್ಬ ರಾಂಲಾಲ್ ಮಾತ್ರ ಕಾರಣವಲ್ಲ. ಆ ಕೀಲು ಬೊಂಬೆಗೆ ಕೀಲು ಕೊಟ್ಟು ಆಡಿಸಿದ ನಿಜವಾದ ಶಕ್ತಿ ಕೇಂದ್ರ ಸರ್ಕಾರ–ಎಂಬಂಶವನ್ನು ಜನರಿಗೆ ಜ್ಞಾಪಿಸುವ ಪ್ರಯತ್ನವಾಗಿ ನ. ರಾ. ಪುರದಲ್ಲಿ ಅಬ್ದುಲ್ ಮಾಜೀದ್ ಮತ್ತು ಸಂಗಡಿಗರು, ಕೇಂದ್ರ ಸರ್ಕಾರದ ಪ್ರತೀಕವಾದ ಅಂಚೆ ಕಚೇರಿ ಎದುರು ಧರಣಿ ನಡೆಸಿ, ಒಂದು ಗಂಟೆ ಕಾಲ ಕೆಲಸ ಸ್ಥಗಿತಗೊಳಿಸಿದರು. ಚಿಕ್ಕಮಗಳೂರಲ್ಲಿ ಇದೇ ಪ್ರಯತ್ನದಲ್ಲಿ ೮ ಜನ ಬಂಧಿತರಾದರು.

§ ಶೃಂಗೇರಿಯಲ್ಲಿ ಬೀಡಿ ಕಾರ್ಮಿಕ ಮಹಿಳೆಯರು ಸಿ.ಐ.ಟಿ.ಯು. ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡರು.

§ ಕೊಪ್ಪದಲ್ಲಿ ಬಂದ್ ಪೂರ್ತಿ ಯಶಸ್ವಿಯಾಯಿತು — (ಊರು ಮುಳುಗಿದರೂ, ಅಪ್ಪಮ್ಮ ಗತಿಸಿದರೂ ಕಡ್ಡೀ ಪಕ್ಷ ಒಂದು ಬಾಗಿಲಾದರೂ ತೆಗೆದು ಸ್ವಲ್ಪ ಹೊತ್ತಾದರೂ ವ್ಯಾಪಾರ ಮಾಡುವ ಕೆಲವು ಅಂಗಡಿಗಳ ಹೊರತು.) ಆದರೆ ಮೆರವಣಿಗೆ ಕರುಣಾಜನಕವಾಗಿತ್ತು. ಧ್ವನಿವರ್ಧಕ ಹೊತ್ತ ರಿಕ್ಷಾದ ಹಿಂದೆ ಇಪ್ಪತ್ತು–ಮೂವತ್ತು ಜನರ ಪುಟ್ಟ ಗುಂಪು ಪುರಭವನದಿಂದ ಬಸ್ ಸ್ಟ್ಯಾಂಡಿನವರೆಗೆ ನಾಚುತ್ತ ಬಂದು ಕೈ ತೊಳೆದುಕೊಂಡಿತು. ರಸ್ತೆಯ ಆಚೀಚೆ ನೂರಾರು ಸಂಖ್ಯೆಯಲ್ಲಿ ಕೈಕಟ್ಟಿ ನಿಂತು ನೋಡುತ್ತಿದ್ದ ಯುವಕರ ನಿರ್ವೀರ್ಯತೆ ಕಂಡು ಎಂಥವರಿಗೂ ನಾಚಿಕೆಯಾಗುತ್ತಿತ್ತು. ಅನಂತರದ ಸಭೆಗೆ ತಕ್ಕಮಟ್ಟಿಗೆ ಜನ ಸೇರಿದ್ದರು.

§ ಬಾಳೆಹೊನ್ನೂರು, ಜಯಪುರಗಳಂಥ ಪೇಟೆಗಳು ಹಾಗಿರಲಿ, ಕುದ್ರೆಗುಂಡಿ, ಶಾನುವಳ್ಳಿ, ನಿಲುವಾಗಿಲುಗಳಂಥ ಹಳ್ಳಿಗಳು ಸಹ ಬಂದ್‌ನಲ್ಲಿ ಮನಃಪೂರ್ವಕ ಪಾಲ್ಗೊಂಡವು

§ ತಮಿಳುನಾಡಿನಲ್ಲಿ ಡಿ.ಎಂ.ಕೆ. ಪಕ್ಷದ ಕಾರ್ಯಕರ್ತನೊಬ್ಬ ಪ್ರಜಾ ಪ್ರಭುತ್ವದ ದಮನ ವಿರೋಧಿಸಿ ಆತ್ಮಾರ್ಪಣೆ ಮಾಡಿದ.

ಪದ್ಯದಂಕಣ

ಮೂಗು

ಸೀನೆಂಬ ಹುಸಿಯ ಈಡ ಹಾರಿಸುವ
ಜೋಡು ನಳಿಗೆಯ
ಕೋವಿ—
ಸೀನಿದಾಕ್ಷಣವೆ ನೀರು ಸೋರುವ
ತಿರುಪಿರದ ಸಾದಾ
ನಲ್ಲಿ—
ನೆರೆಯ ಮನೆಯಲ್ಲಿ ತಿಂಡಿ ಕರಿಯುತಿರೆ
ಒಡನೆ ಅರಳುವ
ಹೂವು—
ಮದನರತಿಯಲ್ಲಿ ಭುಸುಗುಡುತ
ಕಣದೆ ಕಾಳಗಕ್ಕಿಳಿವ
ಹೋರಿ—
ಕಣ್ಣ ಕನ್ನಡಕ ನಿಲ್ಲಲಿದು ಸ್ಟ್ಯಾಂಡು,
ನಶ್ಯವಂದಿಗರ
ಕೊಳಗ—
ಹಠ ಯೋಗದಲ್ಲಿ ರವಿ-ಚಂದ್ರ ನಾಡಿ
ಪವನ ಪಯಣಕ್ಕೆ ಸವೆದ
ಮಾರ್ಗ—
ಧ್ಯಾನಾನುರಕ್ತ ಸಂಕಲ್ಪದಲ್ಲಿ
ಏಕಾಗ್ರಗೊಳಿಸುವ
ದೃಷ್ಟಿ ಕೇಂದ್ರ—
ಅಡಿಗೆ ಬಿದ್ದರೂ ಮೇಲೆಂಬ ವಾದ-
ವನು ಎತ್ತಿ ಹಿಡಿವ
ಲಾಂಛ್ರ—
ಹುಟ್ಟ ಹಣೆಯಲ್ಲಿ ತುಟಿಯ ಮೇಲಿಳಿದ
ಮುಖದ ಸೌಂದರ್ಯ
ಸಾಂದ್ರ—

ಹೆಚ್. ಎಲ್. ಮಹಾಬಲ ರಾವ್,
ಹುಲಿಗರಡಿ.

ತೆರಿಗೆಗಳಿಂದ ಕಾಫಿ ಬೆಳೆಗಾರನ ಸುಲಿಗೆ

ಕಾಫಿಯಿಂದಾಗಿ ನಮ್ಮ ದೇಶಕ್ಕೆ ಅತ್ಯಧಿಕ ವಿದೇಶೀ ವಿನಿಮಯ ಸಿಗುತ್ತಿದೆ. ಕಾಫಿ ಬೆಳೆಯಲ್ಲಿ ಕರ್ಣಾಟಕದ ಸ್ಥಾನ ಉನ್ನತವಾಗಿದ್ದು, ಕಾಫಿ ಉದ್ಯಮ ವ್ಯಾಪಕವಾಗಿ ಬೆಳೆಯುತ್ತಿದೆ. ಕಾಫಿ ಬೆಳೆ ಇಲ್ಲದಿದ್ದರೆ ಮಲೆನಾಡು ಇಂದು ಬರೀ ಕಾಡಾಗಿರುತ್ತಿತ್ತು.

ಇಂತಹ ಉದ್ಯಮಕ್ಕೆ ಸರ್ವ ವಿಧದಲ್ಲೂ ಪ್ರೋತ್ಸಾಹ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಆದರೆ ಸರ್ಕಾರ ಹೊರಲಾರದಷ್ಟು ತೆರಿಗೆ ಹೊರಿಸಿ ಬೆಳೆಗಾರರನ್ನು ನಿರುತ್ಸಾಹಿಗಳನ್ನಾಗಿ ಮಾಡಿದೆ.

ಈಗಾಗಲೇ ಇರುವ ತೆರಿಗೆಗಳ ಜೊತೆಗೆ ನಮ್ಮ ರಾಜ್ಯ ಸರ್ಕಾರ ಶೇಕಡಾ ೪ ರಷ್ಟು ಕೊಳ್ಳುವ ತೆರಿಗೆ ವಿಧಿಸಿ ವಸೂಲಿ ಕ್ರಮ ಜರುಗಿಸುತ್ತಿದೆ. ಇದಕ್ಕಾಗಿ ೧೯೭೨-೭೩ರಲ್ಲಿ ಯೋಜನೆ ಹಾಕಿಕೊಂಡಿದ್ದು, ೬೫–೬೬ರಿಂದಲೂ ಹಿಂದಿನ ಬಾಕಿಯಂತೆ ವಸೂಲು ಮಾಡಬೇಕೆಂಬ ಸರ್ಕಾರದ ತೀರ್ಮಾನವು ಬೆಳೆಗಾರರಿಗೆ ಮಾರಕವಾಗಿದೆ.

ಕಾಫಿ ತೋಟಗಾರಿಕೆಯು ಲಕ್ಷೋಪಲಕ್ಷ ಜನರಿಗೆ ಜೀವನ ಮಾರ್ಗವಾಗಿದೆ. ೧೯೭೧-೭೨ರಲ್ಲಿ ಕಾಫಿ ತೋಟಗಳಲ್ಲಿ ಪ್ರತಿದಿನ ದುಡಿಯುವ ಕೆಲಸಗಾರರ ಸಂಖ್ಯೆ ೨ ಲಕ್ಷದ ೭೬ ಸಾವಿರ ಇತ್ತು. ಈ ಪೈಕಿ ಕರ್ಣಾಟಕದಲ್ಲಿ ೨,೫೯,೦೦೦ ಕೆಲಸಗಾರರಿದ್ದು, ಹೆಚ್ಚಿನ ಉದ್ಯೋಗಾವಕಾಶ ಇದೆ. ದೇಶದಲ್ಲಿರುವ ೯೮೭೬೩ ಕಾಫಿ ತೋಟಗಳ ಪೈಕಿ ೯೩೦೩೬ ಸಣ್ಣ ಪ್ರಮಾಣದ ತೋಟಗಳಾಗಿವೆ. ಇವುಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೊಕ್ಕಸಕ್ಕೆ ಕೋಟ್ಯಾಂತರ ರೂ.ಗಳ ತೆರಿಗೆ ಭರ್ತಿಯಾಗುತ್ತಿದೆ. ಅಲ್ಲದೆ ಇನ್ನೂ ಹಲವು ಉದ್ಯಮಗಳಿಗೆ ಇವು ಪೋಷಕವಾಗಿವೆ. ಆದರೆ ತೆರಿಗೆಯ ಹೊರೆ ಹೆಚ್ಚಿನ ಸಂಖ್ಯೆಯಲ್ಲಿರುವ ಸಣ್ಣ ಪ್ರಮಾಣದ ತೋಟಗಳ ಮೇಲೆ ಅಧಿಕವಾಗಿದೆ.

ರಾಷ್ಟ್ರ ಮಟ್ಟದಲ್ಲಿ ವಿವಿಧ ಉತ್ಪನ್ನಗಳ ಬೆಲೆ ಸೂಚಿಗಳನ್ನು ಗಮನಿಸಿದರೆ, ಬಳಕೆದಾರರ ಬೆಲೆ ಸೂಚಿ (೩೦೬.೬ ಪಾಯಿಂಟ್)ಗಿಂತ ಸಗಟು ಬೆಲೆ ಸೂಚಿ ಕಮ್ಮಿ (೨೭೫)

(೩ನೇ ಪುಟಕ್ಕೆ)

ಕೆ. ಎಸ್. ಶ್ರೀನಿವಾಸ್, ಕೌಳಿ
ಗೌರವ ಕಾರ್ಯದರ್ಶಿ,
ಸಹ್ಯಾದ್ರಿ ಕಾಫಿ ಬೆಳೆಗಾರರ ಸಂಘ,
ಜಯಪುರ

ಭೂ ರಹಿತರ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಪೂರ್ಣಗೊಳ್ಳುತ್ತಿರುವ

ಶೃಂಗೇರಿ ತಾ॥ನ ಎರಡು ಉಪಯುಕ್ತ ರಸ್ತೆ ಕಾಮಗಾರಿಗಳು

ಶೃಂಗೇರಿ: ಈ ತಾ॥ನಲ್ಲಿ ಹಿಂದೆ ಅರ್ಧಂಬರ್ಧವಾಗಿ ನಿಂತು ಹೋಗಿದ್ದ ಎರಡು ಪ್ರಮುಖ ರಸ್ತೆ ಕಾಮಗಾರಿಗಳನ್ನು ಈಗ ಗ್ರಾಮೀಣ ಭೂ ರಹಿತರ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಕೈಗೆತ್ತಿಕೊಂಡು ಪೂರೈಸಲಾಗುತ್ತಿದೆ.

ಶೃಂಗೇರಿ–ಜಯಪುರ ರಸ್ತೆಯ ಮೆಣಸೆಯಿಂದ ಕೊಪ್ಪ–ಜಯಪುರ ರಸ್ತೆಯ ಬಿ.ಜಿ. ಕಟ್ಟೆ ಸಂಪರ್ಕಿಸುವ ಮುಶಿಗೆ–ಹಾಲಂದೂರು ರಸ್ತೆ ಕಾಮಗಾರಿ ಸುಮಾರು ಹತ್ತು ವರ್ಷದ ಹಿಂದೆ ಆರಂಭವಾಗಿ, ಈ ಕಡೆಯಿಂದ ೯ ಕಿ.ಮೀ., ಆ ಕಡೆಯಿಂದ ೪ ಕಿ.ಮೀ. ರಸ್ತೆ ಆದಾಗ ಎರಡೂ ತುದಿಗಳ ಮಧ್ಯೆ ಸುಮಾರು ೨೦೦ ಮೀ. ನಷ್ಟು ಎತ್ತರ ವ್ಯತ್ಯಾಸ ಬಂದು ಒಂದು ಕಿ.ಮೀ. ನಷ್ಟು ದೂರ ರಸ್ತೆ ಆಗದೇ ಉಳಿದು ಹೋಗಿತ್ತು.

ಈ ರಸ್ತೆ ಪೂರ್ಣವಾದರೆ ಕೊಪ್ಪ–ಶೃಂಗೇರಿ ನಡುವೆ ಸುಮಾರು ೬ ಕಿ.ಮೀ. ಉಳಿತಾಯವಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ಈ ಪ್ರದೇಶದ ದುರ್ಗಮವಾದ ಅಸಂಖ್ಯ ಸಣ್ಣ ಪುಟ್ಟ ಹಳ್ಳಿಗಳಿಗೆ ಬಹಳ ಉಪಯುಕ್ತವಾಗುತ್ತದೆ. ಇದಕ್ಕಾಗಿ ಗ್ರಾಮಸ್ಥರು ಮನವಿ ಮಾಡಿ ಮಾಡಿ ನಿರಾಶರಾಗಿ ಕಳೆದ ಚುನಾವಣೆಯನ್ನು ಬಹಿಷ್ಕರಿಸುವ ಬೆದರಿಕೆ ಹಾಕಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ರಸ್ತೆಯಲ್ಲಿ ಈಗ ೩೫ ಸಾವಿರ ರೂ.ಗಳ ಕೆಲಸ ಮುಗಿಯುತ್ತಿದೆ. ಇನ್ನುಳಿದ ಅನುದಾನವೂ ಈ ವರ್ಷವೇ ದೊರೆಯಲಿದ್ದು ರಸ್ತೆ ಈ ವರ್ಷ ಮುಗಿಯುವ ನಿರೀಕ್ಷೆಯಿದೆ.

ಶಿರಾ ಕಚ್ಚಾ ಸ್ಥಿತಿಯಲ್ಲಿರುವ 'ಸಿಂದೋಡಿ–ಸಿರಿಮನೆ–ಚಟ್ನಮನೆ ರಸ್ತೆ'ಯಲ್ಲಿ ನಾಲ್ಕೈದು ವರ್ಷದ ಹಿಂದೆ ೭ ಮೋರಿಗಳನ್ನು ನಿರ್ಮಿಸಲಾಗಿತ್ತು (ಐದಾರು ಕಿ.ಮೀ. ರಸ್ತೆಗೆ ಮಂಜೂರಾಗಿದ್ದು ಒಟ್ಟು ೨೭ ಮೋರಿ!) ಆದರೆ ರಸ್ತೆ ಅವುಗಳ ಉಪಯೋಗ ಪಡೆಯುವಷ್ಟು ಸುಸ್ಥಿತಿಯಲ್ಲಿರಲಿಲ್ಲ.

ಈಗ ಮೇಲ್ಕಂಡ ಯೋಜನೆಯಡಿ ೩೫ ಸಾವಿರ ರೂ. ಅನುದಾನ ಬಂದಿದ್ದು, ೭.೫ ಮೀ. ಅಗಲದ ರಸ್ತೆ ಮಾಡಿಸಲಾಗುತ್ತಿದೆ. (ಈ ಬಗ್ಗೆ ಗ್ರಾಮಸ್ಥರಿಂದ ಸಲಹೆ-ಸೂಚನೆ ದೂರುಗಳೇನಾದರೂ ಇದ್ದರೆ ಶೃಂಗೇರಿಯ ಸ॥ ಇಂಜಿನಿಯರ್ ಎಂ.ಜಿ.ಸೋಮಶೇಖರ್ ಅವರಲ್ಲಿ ತಿಳಿಸಬೇಕೆಂದು ಕೋರಲಾಗಿದೆ.)

ಈಗ ಕೆಲ್ಲಾರು ಬಳಿ ನಂದಿನಿ ಹೊಳೆಗೆ ೮೫ ಸಾವಿರ ರೂ. ವೆಚ್ಚದ ಕಾಲು ಸೇತುವೆಗೆ ಟೆಂಡರ್ ಅಂಗೀಕೃತವಾಗಿದ್ದು, ಕೆಲಸ ಈ ವರ್ಷ ಮುಗಿಯಲಿದೆ. ನಳಿನಿ ಹೊಳೆಗೂ ಒಂದು ಸೇತುವೆ ಆಗಿಬಿಟ್ಟರೆ ಈ ಭಾಗದ ಹತ್ತಾರು ಹಳ್ಳಿಗಳಿಗೆ ಮಳೆಗಾಲದ ಆರಾರು ತಿಂಗಳ 'ದ್ವೀಪಾಂತರ ವಾಸ' ತಪ್ಪಬಹುದು.

ಆದರೆ, ಇದಕ್ಕಾಗಿ ಗ್ರಾಮಸ್ಥರು ಈಗ್ಗೆ ೨೫ ವರ್ಷಗಳಿಂದಲೂ ಕೇಳುತ್ತ ಬಂದಿದ್ದು, ಕಳೆದ ವರ್ಷ ಇಲಾಖೆ ಯೋಜನೆ ತಯಾರಿಸಿ ಕಳಿಸಿದ್ದರೂ ಈ ವರ್ಷ ಮಂಜೂರಾಗಲಿಲ್ಲ. ತಾಲ್ಲೂಕಿನ ಆದ್ಯತೆಯ ಪ್ರಕಾರ ಮುಂದಿನ 'ಕಂತಿ'ನಲ್ಲೂ ದೊರೆಯುವುದು ಕಷ್ಟವೆನ್ನಲಾಗಿದ್ದು, ಶಾಸಕರ ವಿಶೇಷ ಪ್ರಯತ್ನವೇನಾದರೂ ನಡೆದಲ್ಲಿ ಮಾತ್ರ ಈ ವರ್ಷವೇ ದೊರೆತೀತೇನೋ ಎಂದು ಗ್ರಾಮಸ್ಥರು ಕಾಯುತ್ತಿದ್ದಾರೆ.

ಈವರೆಗೆ ಸರ್ಕಾರಗಳು (ಬ್ರಿಟಿಷರ ಕಾಲದಿಂದ ಈವರೆಗೂ) ಈ ಕುಗ್ರಾಮಗಳಿಗಾಗಿ ಮಾಡಿದ್ದು ಏನೂ ಇಲ್ಲವೆಂಬಷ್ಟು ಅಲ್ಪ. ಆದ್ದರಿಂದ ಈ ಸೇತುವೆ ಈ ಭಾಗದ ಜನಕ್ಕೆ ಮೊಟ್ಟ ಮೊದಲ ಅರ್ಥಪೂರ್ಣ ಕೊಡುಗೆಯಾಗಬಲ್ಲುದು.

ರ್‍ಯಾಂಕ್ ವಿಜೇತ ಮೃದಂಗ ಪಟು

ಈ ವರ್ಷದ ಕರ್ನಾಟಕ ತಾಳವಾದ್ಯ ಪರೀಕ್ಷೆಯ ಮೃದಂಗ ವಿದ್ವತ್ ಗ್ರೇಡಿನಲ್ಲಿ ೩ನೇ ರ್‍ಯಾಂಕ್ ಪಡೆದ ಎಸ್.ಆರ್.ಗಣೇಶ ಮೂರ್ತಿ ಹರಿಹರಪುರದ ಬಳಿಯ ಸೂರಿ[illegible]ಯವರು. ಚಿಕ್ಕಂದಿನಲ್ಲೇ ಅಜ್ಜ ಸೂರಿ[illegible] ಸುಬ್ಬರಾಯರಿಂದ ಮೃದಂಗದ ಬಗ್ಗೆ ಆ[illegible]ರ್ಷಿತರಾಗಿ ತಂದೆ ರಾಮರಾಯರ ಪ್ರೋ[illegible]ತ್ಸಾಹ ಪಣೆಯಿಂದ ವಿದ್ವಾನ್ ಕಾಂಚನ ವಿ.ಮೂರ್ತಿಯವರಲ್ಲೂ, ದಕ್ಷಿಣ ಕನ್ನಡದ ಕಾಂಚನ ಸಂಗೀತ ಕಾಲೇಜಿನ ತಾಳವಾದ್ಯ ಮುಖ್ಯಸ್ಥರಾದ ವಿ॥ ಕೆ. ಇ. ಕೃಷ್ಣ ಅಯ್ಯರ್‌ರಲ್ಲೂ ತರಬೇತಿ ಪಡೆದರು. ಹಲವಾರು ಅಗ್ರಶ್ರೇಣಿಯ ಕಲಾವಿದರುಗಳಿಗೆ ಪಕ್ಕವಾದ್ಯ ನುಡಿಸಿ ಅನೇಕ ಹಿರಿಯ ವಿದ್ವಾಂಸರಿಂದ ಮಾರ್ಗದರ್ಶನ ಪಡೆದಿರುವ ಇವರು ಈ ಪ್ರಾಂತ್ಯದ ಕಲೆಯ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದಾರೆ.

ಓದುಗರ ಪತ್ರಗಳು

ಗಂಡಸರ ಕೀಟಲೆಗೆ ಏನೆನ್ನುತ್ತೀರಿ ?

ಮಾನ್ಯರೆ,

ನಿಮ್ಮ ೨೬–೮–೮೪ರ ಸಂಚಿಕೆಯಲ್ಲಿ ಓದುಗರೊಬ್ಬರು, ಕೆಲವು ಹುಡುಗಿಯರು ರಸ್ತೆಬದಿಯ ದೇವಸ್ಥಾನವೊಂದರಲ್ಲಿಕುಳಿತು ರಸ್ತೆಯಲ್ಲಿ ಓಡಾಡುವವರಿಗೆ ಹಾಸ್ಯ ಮಾಡಿ ನಗುತ್ತ ಕಿರಿಕಿರಿ ಉಂಟುಮಾಡುತ್ತಾರೆಂದು ಬರೆದಿದ್ದಾರೆ.

ಆ ಹುಡುಗಿಯರು ಮಾಡುವುದು ಸರಿ ಎಂದೇನೂ ನಾನು ಸಮರ್ಥಿಸುವುದಿಲ್ಲ. ಆದರೆ ಇದೇ ರೀತಿ ಇಂಥದೇ ಜಾಗಗಳಲ್ಲಿ ಕೂತು ಯುವಕರು ಮಾತ್ರವಲ್ಲ, ಕೆಲವು ಸಲ ವಯಸ್ಕರೂ ಸಹ ದಾರಿಯಲ್ಲಿ ಓಡಾಡುವ ಹೆಣ್ಣು ಮಕ್ಕಳನ್ನು ಎಷ್ಟು ಕಾಡುತ್ತಾರೆ ಎಂಬುದರ ಕಡೆ ಸ್ವಲ್ಪ ಎಲ್ಲರ ಗಮನ ಸೆಳೆಯಬಯಸುತ್ತೇನೆ.

ಇವರದು ಬರೀ ಕಿರಿಕಿರಿಯಲ್ಲ, ಕೀಟಲೆಯಲ್ಲ, ಇನ್ನೂ ಆತಂಕಕಾರಿಯಾಗಿ ಮುಂದುವರಿಯುವುದುಂಟು. ಬರೀ ಹುಡುಗಿಯರಿಗೆ ಮಾತ್ರ ಇವರು ಚುಡಾಯಿಸುತ್ತಾರೆಂದಲ್ಲ, ಸಭ್ಯ ಗೃಹಿಣಿಯರಿಗೆ, ಕೆಲವೊಮ್ಮೆ ಸ್ವಲ್ಪ ಅನಾಕರ್ಷಕವಾಗಿ ಬಟ್ಟೆ ಹಾಕಿದ ಗಂಡಸರಿಗೂ ಸಹ ಇವರು ಗೇಲಿ ಮಾಡಿ 'ಮನರಂಜನೆ' ಪಡೆಯುತ್ತಾರೆ.

ಸಭ್ಯವಾಗಿ, ಮನಸ್ಸು ನೋಯದಂತೆ ಚುಡಾಯಿಸಿದರೆ, ಹಾಸ್ಯ ಮಾಡಿದರೆ ಯಾರೂ ಅಷ್ಟಾಗಿ ಆಕ್ಷೇಪಿಸಲಾರರು. ಆದರೆ ಹಾಸ್ಯ ಅಪಹಾಸ್ಯಕ್ಕೆ, ಚುಡಾಯಿಸುವಿಕೆ ಆತಂಕಕರ ಮಟ್ಟಕ್ಕೆ ಬೆಳೆದರೆ ಮಾತ್ರ ಎಲ್ಲರಿಗೂ ಹಿಂಸೆಯಾಗುತ್ತದೆ.

ಗಂಡಸರು ಮಾತ್ರ ಹೀಗೆ ಮಾಡುವಾಗ ಇದರಿಂದ ಎಷ್ಟು ಹಿಂಸೆಯಾಗುತ್ತದೆಂದಾಗಲೀ ಇದೊಂದು ಅನಿಷ್ಟದ ನಡವಳಿಕೆಯೆಂದಾಗಲೀ ಯಾರ ಮನಸ್ಸಿಗೂ ಅಷ್ಟಾಗಿ ಹೋಗಿರುವುದಿಲ್ಲ. ಆದರೆ ಹೆಣ್ಣುಮಕ್ಕಳೂ ಚುಡಾಯಿಸುತ್ತಾರೆನ್ನುವಾಗ ಮಾತ್ರ ಗಂಡುಗಳಿಗೆ ಹಿಂಸೆಯ ಅನುಭವವಾಗುತ್ತದೆ!

ಇದನ್ನು ಗಂಡಸರೂ ಸ್ವಲ್ಪ ಅರ್ಥ ಮಾಡಿಕೊಂಡು ತಮ್ಮನ್ನು ತಾವು ಹದ್ದುಬಸ್ತಿನಲ್ಲಿಟ್ಟುಕೊಂಡರೆ ಸಮಾಜದಲ್ಲಿ ಎಷ್ಟೊ ನೆಮ್ಮದಿ ನೆಲೆಸಲು ಸಹಾಯಕವಾದೀತೆಂದು ನನ್ನ ಅನಿಸಿಕೆ.

—**ಸುಧಾ,** ತೀರ್ಥಹಳ್ಳಿ.

ಪತ್ರ ಸಾರಾಂಶ

ಸಂಚಾರಿ ಪಶು ಚಿಕಿತ್ಸಾ ಘಟಕ ಏನು ಮಾಡುತ್ತಿದೆ?

ಈ ಹಿಂದೆ ನಮ್ಮ ಪತ್ರಿಕೆಯಲ್ಲಿ ಸಂಚಾರಿ ಪಶು ಚಿಕಿತ್ಸಾ ಘಟಕ ಹಳ್ಳಿಗಳಿಗೆ ಭೇಟಿ ಕೊಡುವ ಕಾರ್ಯಕ್ರಮದ ಪಟ್ಟಿ ಪ್ರಕಟವಾಗಿತ್ತು. ಆದರೆ ಅದು ತಮ್ಮಲ್ಲಿಗೆ ಭೇಟಿ ಕೊಡುತ್ತಿಲ್ಲವಲ್ಲ, ಅದನ್ನು ಕಾಣಲು ಎಲ್ಲಿಗೆ ಹೋಗಬೇಕು? ಎಂದು ಕೇಳುತ್ತಾರೆ ಬಿಲಗದ್ದೆಯ ಕಾವಳಿ ಲಕ್ಷ್ಮೀನಾರಾಯಣಪ್ಪ. ಅಲ್ಲದೆ, ಹಿಂದೆ ನಿಲುವಾಗಿಲು ಪಂಚಾಯ್ತಿ ಹಾಲ್‌ಗೆ ಪ್ರತೀ ಬುಧವಾರ ಹರಿಹರಪುರದ ಸರ್ಕಾರಿ ವೈದ್ಯರು ಬಂದುಹೋಗುತ್ತಿದ್ದರು, ಈಗ ಬರುತ್ತಿದ್ದ ಹಾಗಿಲ್ಲ, ಕಾರಣವೇನು? ಎಂದೂ ಅವರು ಕೇಳಿದ್ದಾರೆ.

ಕೊಳವೆ ಬಾವಿ

ಬಿಳಾಲುಕೊಪ್ಪದಲ್ಲಿ ಆರೇಳು ತಿಂಗಳ ಹಿಂದೆ ಊರವರು ಸೇರಿ ಮಾರ್ಗ ದುರಸ್ತಿ ಮಾಡಿ ಸರ್ಕಾರದ ರಿಗ್ ತರಿಸಿ ಒಂದು ಕೊಳವೆ ಬಾವಿ ತೋಡಿಸಿದರು. ಆ ಸುತ್ತಮುತ್ತ ಶಾಲೆ, ಮನೆಗಳು, ದೇವಸ್ಥಾನ ಎಲ್ಲ ಇದ್ದು, ಬಾವಿ ಬಹಳ ಉಪಯುಕ್ತವಾಗುತ್ತಿತ್ತು. ಆದರೆ ಅದಕ್ಕೆ ಇನ್ನೂ ನೀರೆತ್ತುವ ಸಾಧನವನ್ನೇ ಜೋಡಿಸಿಲ್ಲ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಎಲ್ಲಾದರೂ ಇದ್ದರೆ ಈ ಕಡೆ ಗಮನ ಕೊಡಬೇಕೆಂದು ಕೊ. ವೆ. ಗಣೇಶ ಉಡುಪ ಬರೆದಿದ್ದಾರೆ.

ಕಾಫಿ ಬೆಳೆಗಾರನ ಸುಲಿಗೆ

(೨ನೇ ಪುಟದಿಂದ)

ಇದ್ದು, ಆಹಾರ ಧಾನ್ಯಗಳ ಬೆಲೆ ಸೂಚಿ ಇನ್ನೂ ಕಮ್ಮಿ (೨೫೯) ಇವೆ. ಅಂದರೆ ರೈತನಿಗೆ ಸರಿಯಾದ ಪ್ರತಿಫಲ ಸಿಕ್ಕುತ್ತಿಲ್ಲವೆಂಬುದು ತಿಳಿಯುತ್ತದೆ. ಎಲ್ಲ ಕೃಷಿ ಉತ್ಪನ್ನಗಳ ಪೈಕಿ ಕಾಫಿಗೆ ಬರುವ ಪ್ರತಿಫಲ ತೀರಾ ಕಮ್ಮಿ (೧೫೯ ಪಾಯಿಂಟ್) ಇದೆ. (ಟೀಗೆ ೪೦೬ ಪಾಯಿಂಟ್.) ಕಾಫಿ ಮತ್ತು ಟೀಗೆ ಹೋಲಿಸಿದಾಗ ಕಾಫಿಗೆ ವಿಧಿಸಿರುವ ತೆರಿಗೆ ಹೊರಲಾರದ ಹೊರೆಯಾಗಿದೆ.

ಕಳೆದ ೨-೩ ವರ್ಷಗಳಲ್ಲಿ ಅನಾವೃಷ್ಟಿಯಿಂದ ಕಾಫಿ ಬೆಳೆಗಾರರು ಮೊದಲೇ ಕಷ್ಟಕರವಾದ ಪರಿಸ್ಥಿತಿಯಲ್ಲಿದ್ದು, ಈ ಮಧ್ಯೆ ನಮ್ಮ ಸರ್ಕಾರ ಶೇ. ೧೦ ಮಾರಾಟ ತೆರಿಗೆ, ಶೇ. ೧೦ ಸರ್‌ಚಾರ್ಜ್, ಶೇ. ೧೦ ಗ್ರಾಮಾಭ್ಯುದಯ ತೆರಿಗೆ ವಿಧಿಸಿರುವುದು ನ್ಯಾಯಬಾಹಿರವಾಗಿದೆ. ನೆರೆಯ ತಮಿಳುನಾಡು, ಕೇರಳ ಸರ್ಕಾರಗಳು ವಿಧಿಸಿರುವ ಸರಾಸರಿ ತೆರಿಗೆ ಶೇ. ೬. ಇದಕ್ಕೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಶೇ. ೫ ರಷ್ಟು ತೆರಿಗೆಯ ಭಾರ ಜಾಸ್ತಿಯಾಗಿದೆ. ನಮ್ಮ ರಾಜ್ಯದಲ್ಲಿ ಕಾಫಿಗೆ ಭೂ ಕಂದಾಯ ಹೆಕ್ಟೇರ್ ಒಂದಕ್ಕೆ (ಉಪ ಕರಗಳ ಸಹಿತ) ರೂ. ೩೭–೫೦ ಪೈ ಆಗುತ್ತದೆ. ಬೇರೆ ಯಾವ ಬೆಳೆಗೂ ಇಂತಹ ಭೂ ಕಂದಾಯ ಇಲ್ಲ.

ಕೇಂದ್ರ ಸರ್ಕಾರದ ತೆರಿಗೆಯೊಂದೇ ಸಾಕಷ್ಟು ಹೆಚ್ಚಾಗಿದ್ದು (ಟನ್ನಿಗೆ ೭೭೩೬.೦೦ ರೂ.), ಇದರ ಜೊತೆಗೆ ರಾಜ್ಯ ಸರ್ಕಾರ ಕೂಡ ಶೇ. ೪ರ ಕೊಳ್ಳುವ ತೆರಿಗೆ ವಿಧಿಸಿ ೧೯೮೫–೮೬ರಿಂದ ವಸೂಲಿ ಕ್ರಮ ಕೈಗೊಂಡಿದೆ. ಇದಲ್ಲದೆ, ಮಾರಾಟ ತೆರಿಗೆಯ ಮೇಲೆ ಸರ್‌ಚಾರ್ಜ್ ಮತ್ತು ಗ್ರಾಮಾಭ್ಯುದಯ ತೆರಿಗೆ ಹೇರಿರುವುದು ಕಾಫಿ ಬೆಳೆಗಾರನಿಗೆ ಭವಿಷ್ಯವೇ ಇಲ್ಲವೆಂದಾಗಿದೆ.

ಒಂದು ಎಕರೆಗೆ ಸರಾಸರಿ [illegible] ಕೆ.ಜಿ. ಕಾಫಿ ಬೆಳೆಯಲಾಗುತ್ತಿದೆಯೆಂದು ಲೆಕ್ಕ ಹಾಕಲಾಗಿದೆ. ಎಕರೆವಾರು ಆದಾಯ ರೊಬಸ್ಟಾದಲ್ಲಿ ೩೧೬೦ ರೂ. ಮತ್ತು ಅರೇಬಿಕಾದಲ್ಲಿ ೩೭೮೦ ರೂ. ಎಂದು ಅಂದಾಜು ಮಾಡಲಾಗಿದೆ. ಇದು ೧೯೮೮-[illegible] ಅಂಕಿ-ಅಂಶದ ಪ್ರಕಾರ ಪೂರ್ಣ ಬೆಳೆ ಕೊಡುವ ತೋಟಗಳಿಗೆ ಮಾತ್ರ ಅನ್ವಯಿಸುತ್ತದೆ. ಇದರಿಂದ ಕಾಫಿ ತೋಟಗಾರಿಕೆ ನಷ್ಟದಲ್ಲಿ ನಡೆಯುತ್ತಿರುವುದನ್ನು ಮನಗಾಣಬಹುದು.

ಈಗ ಕಾಫಿ ಬೆಳೆಗಾರರ ಅಳಿವು-ಉಳಿವಿನ ಪ್ರಶ್ನೆ ಎದುರಾಗಿದೆ. ಈಗ ಜಾಲ್ತಿಯಲ್ಲಿರುವ ಶೇ. ೧೦ರ ಮಾರಾಟ ತೆರಿಗೆಯಲ್ಲಿ ಅರ್ಧದಷ್ಟು ರಿಯಾಯ್ತಿ ಕೊಡುವುದು ಮತ್ತು ಈಗತಾನೇ ವಿಧಿಸುತ್ತಿರುವ ಶೇ. ೪ರ [illegible] ತೆರಿಗೆಯನ್ನು ರದ್ದು ಪಡಿಸದೇ ಹೋದಲ್ಲಿ ಈ ಬಗ್ಗೆ ಮುಂದೆ ಬರಬಹುದಾದ [illegible]ವನ್ನು ಸರ್ಕಾರದ ಗಮನಕ್ಕೆ ತರಲು ರಾಜ್ಯದ ಎಲ್ಲಾ ಕಾಫಿ ಬೆಳೆಗಾರರ ಸಂಘಗಳೂ ಒಟ್ಟಾಗಿ ಆಂದೋಲನ ಹೂಡುವ ಚಿಂತನೆ ನಡೆಯುತ್ತಿದೆ.

ಕಾಫಿ ಬೆಳೆಗಾರರ ತೆರಿಗೆ ಹೊರೆಯನ್ನು ತಗ್ಗಿಸುವ ಬಗ್ಗೆ ಅಂತಿಮ ಹೋರಾಟಕ್ಕಾಗಿ ವಿವಿಧ ಸಂಘ ಸಂಸ್ಥೆಗಳು ತೀರ್ಮಾನಿಸಬೇಕೆಂದು ಸಿದ್ದಾಪುರ ಕಾಫಿ ಬೆಳೆಗಾರರ ಸಂಘ ಕರೆ ಕೊಡುತ್ತದೆ.

(ಮೇ. ಮೇಲ್ಕಾಣಿಸಿದ ಅಂಕಿ ಅಂಶಗಳನ್ನು ಇಂಡಿಯನ್ ಕಾಫಿ ಮಾಸಪತ್ರಿಕೆಯ ಆಧಾರದಿಂದ ಕೊಡಲಾಗಿದೆ.)

ತಟ್ಟನೆ ಏರಿಸಿರುವ ಸೌದೆ ದರ ಇಳಿಸಲು
ಶಾಸಕರಿಗೆ ಮಾತೃಮಂಡಳಿಯ ಮನವಿ

ಕೊಪ್ಪ: ಇಲ್ಲಿನ ಅರಣ್ಯ ಇಲಾಖೆಯ ಸೌದೆ ಡಿಪೋದಲ್ಲಿ ಸೌದೆ ಮಾರಾಟದ ದರವನ್ನು ಕ್ವಿಂಟಾಲಿಗೆ ರೂ.೧೧.೮೦ರಿಂದ ಒಂದೇ ಸಲಕ್ಕೆ ೧೯ ರೂ.ಗೆ ಏರಿಸಿರುವುದನ್ನು ಪುನಃ ಮೊದಲಿನ ಬೆಲೆಗೇ ಇಳಿಸಬೇಕೆಂದು ಇಲ್ಲಿನ ಪ್ರಬೋಧಿನಿ ಮಾತೃ ಮಂಡಳಿಯ ನಿಯೋಗ ಈಚೆಗೆ ಶಾಸಕರನ್ನು ಭೇಟಿ ಮಾಡಿ ಒತ್ತಾಯಿಸಿತು. ಈ ಬಗ್ಗೆ ಅರಣ್ಯ ಮಂತ್ರಿಗಳಲ್ಲಿ ಚರ್ಚಿಸಿ ಕನಿಷ್ಠ ೧೫ ರೂ.ಗಾದರೂ ಇಳಿಸಲು ಯತ್ನಿಸುವುದಾಗಿ ಶಾಸಕರು ಆಶ್ವಾಸನೆ ಕೊಟ್ಟರು.

ಈ ನಡುವೆ ಮಂಡಳಿಯ ಇದೇ ಮನವಿಗೆ ಡಿಎಫ್ಒ ಅವರು ಉತ್ತರಿಸಿ, ಕಟ್ಟಿಗೆಯ ಸಾಗಾಣಿಕೆ ವೆಚ್ಚ ಮುಂತಾದುವು ಏರಿರುವುದರಿಂದ ಸರ್ಕಾರದ ಆಜ್ಞೆಯಂತೆ ನಿಗದಿಗೊಳಿಸಿರುವ ಈ ದರವನ್ನು ಇಳಿಸಲಾಗದೆಂದ ತಿಳಿಸಿದ್ದಾರೆ.

ಕಳಸದಲ್ಲಾದದ್ದು ಇಲ್ಲಿ ಆಗದೆ?

ಕಳಸದಲ್ಲಿ ಸೌದೆ ದರ ಟನ್ನಿಗೆ ೨೪೬ ರೂ.ಗೆ ಏರಿಸಿದ್ದನ್ನು ಸಾರ್ವಜನಿಕರ ಮನವಿಯಂತೆ ಶಿವಮೊಗ್ಗ ವೃತ್ತ ಅರಣ್ಯ ಸಂರಕ್ಷಣಾಧಿಕಾರಿಯವರು ೧೮೪ ರೂ.ಗೆ ಇಳಿಸಿದ್ದು, ಕಡಿಮೆ ವೆಚ್ಚದಲ್ಲಿ ಸಾಗಾಣಿಕೆ ಮಾಡಿ ಕೊಡಲು ಅಲ್ಲಿನ ಜನ ಮುಂದೆ ಬಂದಲ್ಲಿ ದರವನ್ನು ಇನ್ನೂ ಕಡಿಮೆ ಮಾಡುವ ಭರವಸೆ ಕೊಟ್ಟದ್ದಾರೆಂದು ವರದಿಯಾಗಿದೆ.

ಕಳಸದಲ್ಲಾದದ್ದು ಕೊಪ್ಪದಲ್ಲೂ ಆಗಬಹುದಲ್ಲ?

ಬೇಗಾರು ಶಾಲೆಗೆ ವಿಜ್ಞಾನದ ಉಪಾಧ್ಯಾಯರಿಲ್ಲ

ಬೇಗಾರು: ಇಲ್ಲಿ ಈ ವರ್ಷ ಆರಂಭವಾಗಿರುವ ಸರ್ಕಾರಿ ಪ್ರೌಢಶಾಲೆಗೆ ಇನ್ನೂ ವಿಜ್ಞಾನದ ಉಪಾಧ್ಯಾಯರು ನೇಮಕವಾಗಿಲ್ಲ. ಮುಖ್ಯೋಪಾಧ್ಯಾಯರಾದ ಎ.ಲಕ್ಷ್ಮಣದಾಸ್ ಮತ್ತು ಸ್ಥೈಪೆಂಡರಿ ಅಧ್ಯಾಪಕ ಶಿವಪ್ಪ ಇಬ್ಬರೂ ಕಲಾ ವಿಭಾಗದವರು. ಶಾಲೆಯಲ್ಲಿ ೬೨ ಜನ ವಿದ್ಯಾರ್ಥಿಗಳಿದ್ದು ತೀರಾ ಹಿಂದುಳಿದ ಇಲ್ಲಿನ ಹಳ್ಳಿಗಳಿಗೆ ಈ ಶಾಲೆಯ ಅಗತ್ಯ ಮತ್ತು ಉಪಯುಕ್ತತೆಯನ್ನು ಸೂಚಿಸುತ್ತದೆ.

ಸಂತ ಸೇವಾಶ್ರಮ

ಶೃಂಗೇರಿ: ಖ್ಯಾತ ಕೀರ್ತನಕಾರರಾಗಿದ್ದ ದಿ॥ ರಾಮಕೃಷ್ಣ ಶಾಸ್ತ್ರಿಗಳ ಸ್ಮರಣಾರ್ಥ ಇಲ್ಲಿನ ಚಪ್ಪರದಾಂಜನೇಯ ದೇವಸ್ಥಾನದಲ್ಲಿ ಸಂತ ಸೇವಾಶ್ರಮದ ಉದ್ಘಾಟನೆಯನ್ನು ಶಾಸ್ತ್ರಿಗಳ ಶಿಷ್ಯರಾದ ಜಗಟೆ ಗುಂಡಯ್ಯ ನೆರವೇರಿಸಿದರು. ಕೆ. ಆರ್. ಅಣ್ಣಯ್ಯ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಎ.ಕೆ.ಭಟ್ ಮತ್ತು ಎಂ.ಆರ್.ನಂಜುಂಡ ಶಾಸ್ತ್ರಿ ಮುಖ್ಯಅತಿಥಿಗಳಾಗಿದ್ದರು.

ರತ್ನಮ್ಮನ ಸಾವಿನ ಬಗ್ಗೆ ತನಿಖೆ ಆಗುವುದೆ?

ಬಸರೀಕಟ್ಟೆಯಲ್ಲಿ ಆರೋಗ್ಯ ಕಾರ್ಯಕರ್ತೆಯಾಗಿದ್ದ ಕು॥ ರತ್ನಮ್ಮ ಜುಲೈ ೭ ರಂದು ಅಸಹಜ ರೀತಿಯಲ್ಲಿ ಸಾವಪ್ಪಿದ ಬಗ್ಗೆ ಸಿ.ಒ.ಡಿ. ತನಿಖೆಯಾಗಬೇಕೆಂದು ಆ.೧೧ರ ಸಭೆಯಲ್ಲಿ ಒತ್ತಾಯಿಸಿದ ಚಿಕ್ಕಮಗಳೂರು ಜಿಲ್ಲಾ ಆ॥ಕಾ॥ಸಂಘ ೧೫ ದಿನಗಳ ಗಡುವು ಕೊಟ್ಟಿದ್ದು, ಅನಂತರ ಜಿಲ್ಲಾದ್ಯಂತ ಮುಷ್ಕರದ ಬೆದರಿಕೆ ಹಾಕಿತ್ತು. ಇದರ ಪರಿಣಾಮವೇನಾಯಿತೆಂಬುದು ಗೊತ್ತಾಗಿಲ್ಲ.

ಅಭಿನಂದನೆ

ಶೃಂಗೇರಿ: ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕು ಸತತವಾಗಿ ೩ ನೇ ಬಾರಿ ಬಹುಮಾನ ಗಳಿಸಿರುವ ಬಗ್ಗೆ ಬ್ಯಾಂಕಿನ ಅಧ್ಯಕ್ಷರು, ಸದಸ್ಯರು ಮತ್ತು ನೌಕರ ವರ್ಗದವರನ್ನು ಪುರಸಭಾಧ್ಯಕ್ಷ ಕೆ. ಆರ್. ಅಣ್ಣಯ್ಯ ಹೆಗ್ಡೆ ಅಭಿನಂದಿಸಿದ್ದಾರೆ.

ಕೃತಜ್ಞತೆಗಳು

ಮಾನ್ಯ ಸಹಕಾರಿ ಬಂಧುಗಳಲ್ಲಿ,

ತಾ. ೩೧-೮-೮೪ ರಂದು ತಾ. ವ್ಯ.ಮಾ.ಸ.ನಿ., ಕೊಪ್ಪ ಇದರ ಡೈರೆಕ್ಟರುಗಳ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನನಗೆ ಸಹಕರಿಸಿದ ಗೆಳೆಯರೆಲ್ಲರಿಗೂ ಹಾಗೂ ಮತನೀಡಿ ನನ್ನನ್ನು ಜಯಶೀಲನನ್ನಾಗಿಸಿದ ತಮ್ಮೆಲ್ಲರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಹೆಚ್. ಟಿ. ಕೃಷ್ಣಮೂರ್ತಿ,
ಹಿರೇಕೊಡಿಗೆ, ಕೊಪ್ಪ ತಾ॥

ಅ.ಭಾ.ವಿ.ಪ. ಪದಾಧಿಕಾರಿಗಳು

ಕೊಪ್ಪ: ಇಲ್ಲಿನ ಅ.ಭಾ.ವಿದ್ಯಾರ್ಥಿ ಪರಿಷತ್ ಶಾಖೆಯ ಸರ್ವಸದಸ್ಯರ ಸಭೆ ಆ.೨೮ ರಂದು ನಡೆದು ಈ ಸಾಲಿಗೆ ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾದರು— ಬಾಲಚಂದ್ರ ನಾಯಕ್, ಕಿ॥ ಕಾಲೇಜು ಉಪನ್ಯಾಸಕ (ಅಧ್ಯಕ್ಷ), ಎಸ್.ಸಿ.ನಾಗಪ್ಪ(ಉಪಾಧ್ಯಕ್ಷ), ಎ. ಎಸ್. ರತ್ನಾಕರ್ (ಕಾರ್ಯದರ್ಶಿ), ಸತ್ಯನಾರಾಯಣ (ಕಾರ್ಯಾಲಯ ಕಾರ್ಯದರ್ಶಿ), ನಾಗಭೂಷಣ (ಖಜಾಂಚಿ), ಅಬ್ದುಲ್ ರಜಾಕ್, ಶಶಿಧರ, ಸುಮಿತ್ರಾದೇವಿ (ಸಹ ಕಾರ್ಯದರ್ಶಿಗಳು) ಹಾಗೂ ೧೮ ಮಂದಿ ಕಾರ್ಯಕಾರಿ ಮಂಡಳಿ ಸದಸ್ಯರು.

ಮೇಲ್ಪಾಲಿನಲ್ಲಿ ಗಿರಿಜನರಿಗೆ ಸಾಲ ವಿತರಣೆ

ಮೇಲ್ಪಾಲು: ಇಲ್ಲಿಯ ಕರ್ನಾಟಕ ಬ್ಯಾಂಕ್ ಶಾಖೆ ಆ.೧೬ ಮತ್ತು ೨೧ರಂದು ೧೫ ಗಿರಿಜನ ಬಡ ಕುಟುಂಬಗಳಿಗೆ ೨೦ ಎಮ್ಮೆ ಮತ್ತು ೧೦ ಜರ್ಸಿ ಹಸುಗಳನ್ನು ಕೊಳ್ಳಲು ಹಾಗೂ ಜಾನುವಾರು ಆಹಾರಕ್ಕೆ ಮತ್ತು ಕೊಟ್ಟಿಗೆ ಕಟ್ಟಲು ಒಟ್ಟು ೧,೪೦,೦೦೦ ರೂ.ಗಳನ್ನು ೨೦ ಅಂಶ ಕಾರ್ಯಕ್ರಮದ ಅನ್ವಯ ಹಂಚಿದ್ದಾಗಿ ಶಾಖಾ ಮೆನೇಜರ್ ಎನ್.ರಾಘವಾಚಾರ್ ತಿಳಿಸಿದ್ದಾರೆ.

ಸಿಂಡಿಕೇಟ್ ಬ್ಯಾಂಕಿನ ಕೃಷಿ ಕಾರ್ಯಕ್ರಮ

ಕೊಪ್ಪ: ಇಲ್ಲಿನ ಸಿಂಡಿಕೇಟ್ ಬ್ಯಾಂಕ್ ಶಾಖೆ ಆ. ೧೯ ರಂದು ರೈತರಿಗಾಗಿ "ಆಧುನಿಕ ಬೇಸಾಯ ಕ್ರಮಗಳು" ಎಂಬ ವಿಷಯದಲ್ಲಿ ತಜ್ಞ ಭಾಷಣ ಏರ್ಪಡಿಸಿತ್ತು.

ಸ್ವಾಗತ ಕೋರಿದ ಬ್ಯಾಂಕಿನ ಗ್ರಾ.ಅ. ಅಧಿಕಾರಿ ಎಂ.ಆರ್‌ವಿ.ರೆಡ್ಡಿ, ವೈಜ್ಞಾನಿಕ ಕೃಷಿ ಅಭಿವೃದ್ಧಿಯ ಬಗ್ಗೆ ಬ್ಯಾಂಕಿನ ಯೋಜನೆಗಳನ್ನು ವಿವರಿಸಿದರು.

ತಜ್ಞ ಭಾಷಣ ಮಾಡಿದ ಸಹಾ॥ ಕೃಷಿ ನಿರ್ದೇಶಕ ಎಂ.ಎಸ್.ಸುಬ್ಬಯ್ಯ ಗೌಡರು, ಸುಧಾರಿತ ಭತ್ತದ ತಳಿಗಳು, ತಿಪ್ಪೆಗೊಬ್ಬರದ ಜೊತೆ ರಾಸಾಯನಿಕ ಗೊಬ್ಬರದ ಉಪಯೋಗ, ಕೀಟ ನಾಶಕಗಳು, ನಾಟಿಯ ಕ್ರಮ ಮುಂತಾದುವನ್ನು ವಿವರಿಸಿದರು.

ಸ್ಥಳೀಯ ಕೃಷಿ ವಿಚಾರ ವಿನಿಮಯ ಕೇಂದ್ರದ ಅಧ್ಯಕ್ಷ ಎಸ್.ವಿ.ಗಣೇಶ ರಾವ್ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕು ಕೃಷಿಗಾಗಿ ನೀಡುವ ನೆರವನ್ನು ಪಡೆದು ಸದುಪಯೋಗ ಪಡಿಸಿಕೊಳ್ಳಬೇಕೆಂದು ಬ್ಯಾಂಕಿನ ಮ್ಯಾನೇಜರ್ ಯು. ಎನ್. ಕಲ್ಕೂರ್ ವಿನಂತಿಸಿದರು. ಎಂ.ಆರ್.ಕಣ್ಣನ್ ವಂದಿಸಿದರು.

ಭಾವಸಾರ್ ಕ್ಷತ್ರಿಯ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಕೊಪ್ಪ: ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳ ಭಾವಸಾರ್ ಕ್ಷತ್ರಿಯ ಜನಾಂಗಕ್ಕೆ ಸೇರಿದ ಡಿಪ್ಲೊಮಾ, ಬಿ.ಇ., ಎಂ.ಬಿ.ಬಿ.ಎಸ್. ಮತ್ತಿತರ ಯಾವುದೇ ಕಾಲೇಜುಗಳ ಬಡ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನದ ಅರ್ಜಿ ಫಾರಂಗಳಿಗಾಗಿ ಒಂದು ರೂ. ಸ್ಟಾಂಪ್ ಇಟ್ಟು ಡಿ. ವೈ. ರಾಣೋಜಿರಾವ್ ಅಂಡ್ ಸನ್ಸ್ ಧರ್ಮಸಂಸ್ಥೆ, ಬಿ.ಹೆಚ್. ರಸ್ತೆ, ಭದ್ರಾವತಿ — ಈ ವಿಳಾಸಕ್ಕೆ ಬರೆದು ಕೊಳ್ಳಬಹುದು. ಅರ್ಜಿಗಳನ್ನು ೧೫-೮-೮೪ ರಿಂದ೧೦-೧೦-೮೪ರ ವರೆಗೆ ಸ್ವೀಕರಿಸಲಾಗುತ್ತದೆ.

ಸಂಖ್ಯೆ: ಹೆಚ್‌ಐ.ಪಿಆರ್./384/84–85

ಪುರಸಭಾ ಕಾರ್ಯಾಲಯ,
ಕೊಪ್ಪ, ದಿನಾಂಕ 31ನೇ ಆಗಸ್ಟ್ 1984.

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅಂಗೀಕೃತ ಕಂಟ್ರಾಕ್ಟ್‌ದಾರರಿಂದ ಕೆಳಗೆ ಕೊಡಲಾದ ಕೆಲಸಗಳಿಗಾಗಿ ನಿಗದಿತ ಫಾರಂನಲ್ಲಿ ದ್ವಿಪ್ರತಿಯಲ್ಲಿರುವ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅವುಗಳನ್ನು ಮುಖ್ಯಾಧಿಕಾರಿಗಳು, ಪುರಸಭೆ, ಕೊಪ್ಪ, ಇಲ್ಲಿ ದಿನಾಂಕ 15–9–1984ರ ಸಂಜೆ 5–00 ಗಂಟೆಯವರೆಗೆ ಸ್ವೀಕರಿಸಲಾಗುವುದು.

ಟೆಂಡರ್ ಫಾರಂಗಳನ್ನು ಮುಖ್ಯಾಧಿಕಾರಿಗಳು, ಪುರಸಭೆ, ಕೊಪ್ಪ, ಇಲ್ಲಿ ದಿನಾಂಕ 14–9–1984ರ ಸಂಜೆ 5–00 ಗಂಟೆಗಳವರೆಗೆ ರೂ. 2.00 ಪಾವತಿಸಿ ಪಡೆಯಬಹುದು. ಅಂಚೆ ಮೂಲಕ ಬರುವ ಮನವಿಯನ್ನು ದಿನಾಂಕ 10–9–1984ರಂದು ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕು. ಕೆಲಸಗಳ ಇತರ ವಿವರ ಮತ್ತು ಟೆಂಡರ್ ಷರತ್ತುಗಳನ್ನು ಪುರಸಭಾ ಕಾರ್ಯಾಲಯ, ಕೊಪ್ಪ, ಇಲ್ಲಿ ಪಡೆಯಬಹುದು.

ಕಾಮುಗಾರಿಗಳ ವಿವರ	ಎಸ್ಟಿಮೇಟ್	ಟೆಂಡರಿಗೆ ಕಾಯ್ದಿರಿಸಿದ ಅಂದಾಜು ವೆಚ್ಚ	ಇ.ಎಂ.ಡಿ. ಕಟ್ಟಬೇಕಾದ ಮೊಬಲಗು	ಕೆಲಸ ಮುಗಿಸಲು ಕಾಲಮಿತಿ
1. ಬಸ್ ಸ್ಟಾಂಡಿನಿಂದ ಮಾಂಸದ ಅಂಗಡಿಗೆ	1	6200.00	155.00	1 ತಿಂಗಳು
ಹೋಗುವ ರಸ್ತೆಗೆ ಬೌಲ್ಡರ್ಸ್ ಹಾಕುವುದು	2	6200.00	155.00	"
2. ವಸಂತ ವಿಹಾರ ಹೋಟೆಲಿನಿಂದ ಕಲ್ಯಾಣಮ್ಮ	1	5100.00	127.50	"
ನವರ ಮನೆಯವರೆಗೆ ಡ್ರೈನೇಜ್ ಮಾಡುವುದು	2	5900.00	147.50	"
3. ಕ್ಯಾಟಲ್‌ಪೌಂಡ್ ಗೋಡೆ ಕಟ್ಟಿಸುವುದು	1	2500.00	62.50	"
4. ಡಿ.ಸಿ.ಸಿ. ಬ್ಯಾಂಕ್ ಹತ್ರ ಜಲ್ಲಿ ರಸ್ತೆಮಾಡಿಸುವುದು	1	3550.00	88.75	"

(ಸಹಿ) ಆರ್. ಗುಂಡೂರಾವ್, ಮುಖ್ಯಾಧಿಕಾರಿಗಳು
ಪುರಸಭಾ ಕಾರ್ಯಾಲಯ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: **ಸಿರಿಮನೆ ನಾಗರಾಜ್,** ಅಚ್ಚು: ದೀನಪಟಗೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: **ಕಲ್ಕುಳಿ ವಿಠಲ ಹೆಗ್ಡೆ**